# ಪ್ರಧಾನ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ

ಸಿಸಿ ನಂಬ್ರಃ **346/2024**
ಸಿಡಬ್ಲ್ಯೂ- 04
ಪಿಡಬ್ಲ್ಯೂ- 04

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಸುಭಾಷಿಣಿ, |
| ಗಂಡನ ಹೆಸರು | ಃ | ಮುರಳಿ, |
| ಪ್ರಾಯ | ಃ | 57 ವರ್ಷ |
| ಉದ್ಯೋಗ | ಃ | ವ್ಯಾಪಾರ, |
| ವಾಸ | ಃ | ಪತ್ತನಂತ್ತಿಟ್ಟ, ಕೇರಳ |

ದಿನಾಂಕಃ **05-11-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೊಧಿಸಲಾಯಿತು

(ಸಾಕ್ಷಿಗೆ ಮಲಯಾಳಂ ಭಾಷೆ ಬಿಟ್ಟು ಕನ್ನಡ ಕೇವಲ ಅರ್ಥ ಆಗುತ್ತದೆ, ಆದರೆ ಸರಿಯಾಗಿ ಗಿವಾತನಾಡಲು ಬರುವುದಿಲ್ಲ ಎಯಂದು ಹೇಳಿದ್ದರಿಂದ ಶ್ರೀಮತಿ ಬಿ ಜೆ ವಕೀಲರನ್ನು ಭಾಷಾ ತರ್ಜುಮೆದಾರರಾಗಿ ನೇಮಕಮಾಡಿಕೊಂಡು ಅವರಿಗೂ ಸಹ ಪ್ರಮಾಣ ವಚನ ಬೊಧಿಸಲಾಯಿತು)

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ನನಗೆ ಆರೋಪಿತರು ಪರಿಚಯ ಇರುತ್ತಾರೆ. ಅಕ್ಟೋಬರ್ 16, 2015 ರಂದು ಬುದವಾರ ಸುಮಾರು 3.00 ಗಂಟೆಗೆ ಸುಮಾರು ಜನ ನಿಂತುಕೊಂಡಿದ್ದು, 1 ನೇ ಆರೋಪಿತ ನನ್ನ ತಾಯಿಯ ಕುತ್ತಿಗೆಯನ್ನು ಒತ್ತಿ ಹಿಡಿದಿದ್ದು, 2 ನೇ ಆರೋಪಿತಳು ದೊಣ್ಣೆಯಿಂದ ನನ್ನ ತಾಯಿಯ ಕೈಗೆ ಹೊಡೆದಿರುತ್ತಾಳೆ. ನಾನು ಬಸ್ಸಿ ನಿಂದ ಇಳಿಯುತ್ತಿದ್ದಾಗ ನನ್ನನ್ನು ನೋಡಿ ಆರೋಪಿತರು ಓಡಿ ಹೋಗಿರುತ್ತಾರೆ. ನನ್ನ ತಾಯಿ ಈ ವಿಚಾರವನ್ನು ಹೇಳಿರುತ್ತಾಳೆ. ಜಾಗ ಖಾಲಿ ಮಾಡಬೇಕು ಇಲ್ಲದಿದ್ದರೆ ಕೊಂದು ಹಾಕುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ. ಆ ಸಮಯದಲ್ಲಿ ಎಸ್ ಪಿ ಅಣ್ಣಾಮಲೈಗೆ ಕರೆ ಮಾಡಿ ಆಸ್ಪತ್ರೆಗೆ ದಾಖಲಾಗಿರುತ್ತಾರೆ. ಈ ಬಗ್ಗೆ ನನ್ನ ತಾಯಿ ದೂರು ಕೊಟ್ಟಿದ್ದು ನಾನು ಹೇಳಿಕೆ ಕೊಟ್ಟಿರುತ್ತೇನೆ. ಜಾಗದ ವಿಚಾರವಾಗಿ 1 ನೇ ಆರೋಪಿತ ಹಾಗೂ ನನ್ನ ತಾಯಿಯ ನಡುವೆ ಗಲಾಟೆ ಆಗಿರುತ್ತದೆ. ಅವರ ಜಾಗವನ್ನು ನಮಗೆ ಕೊಟ್ಟಿದ್ದ ಬಿಟ್ಟು ಹೋಗಬೇಕು ಎಂದು ಗಲಾಟೆ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ದುಡ್ಡನ್ನು ನನ್ನ ತಾಯಿ ಅವರಿಗೆ ಕೊಟ್ಟು ಕರಾರು ಮಾಡಿಕೊಂಡಿರುತ್ತಾರೆ.

ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಯು ಆರ್ ಎಸ್ ರವರಿಂದ

2. ನಮ್ಮ ಮನೆಯಲ್ಲಿ ನಾನು, ನನ್ನ ತಾಯಿ, ನನ್ನ ಮಗ ಹಾಗೂ ಮಗನ ಮಕ್ಕಳು ಇರುತ್ತೇವೆ. ಆ ದಿನ ಘಟನೆ ನಡೆದಾಗ ನನ್ನ ತಾಯಿ ಮಾತ್ರ ಇದ್ದರು, ನಾವು ಯಾರೂ ಇರಲಿಲ್ಲ. ನನ್ನ ತಾಯಿಯ

ಸಿಡಬ್ಲ್ಯೂ- 04
ಪಿಡಬ್ಲ್ಯೂ- 04

ಬಳಿ ಆಗ ಮೊಬೈಲ್ ಫೋನ್ ಇರಲಿಲ್ಲ. ನಮ್ಮ ಮನೆಯ ಅಕ್ಕ ಪಕ್ಕ ತುಂಬಾ ಮನೆಗಳು ಇವೆ ಎಂದರೆ ಸಾಕ್ಷಿ ದಿನೇಶ್, ಬಿಳಿಯ ಎಂಬುವವರ ಮನೆ ಇರುತ್ತದೆ ಎಂದು ನುಡಿಯುತ್ತಾರೆ. 200 ಮೀಟರ್ ವ್ಯಾಪ್ತಿಯಲ್ಲಿ ಬೇರೆ ಬೇರೆ ಮನೆಗಳು ಇರುತ್ತವೆ ಎಂದರೆ ಸರಿ. ನಾವು ಅಲ್ಲಿಗೆ ಬಂದು 14 ವರ್ಷಗಳಾಗಿರುತ್ತದೆ. ಅಲ್ಲಿ ನಮಗೆ 10 ಸೆಂಟ್ಸ್ ಜಾಗ ಕೊಟ್ಟಿರುತ್ತಾರೆ. ಸ್ಥಳದ ದಾಖಲೆಗಳನ್ನು ನಾನು ಪೊಲೀಸರಿಗೆ ಕೊಟ್ಟಿರುತ್ತೇನೆ. ನಮಗೆ ಹಾಗೂ ಆರೋಪಿತರಿಗೆ ಜಾಗದ ತಕರಾರು ಇರುತ್ತವೆ. ಗಲಾಟೆ ವಿಚಾರವಾಗಿ ಆರೋಪಿತರ ವಿರುದ್ಧ ಸುಳ್ಳು ದೂರು ಕೊಟ್ಟಿರುತ್ತೇವೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಾನು ದಿನಾ ಹೋಗುವಂತೆ ಆ ದಿನ ಸಹ ಮೆಡಿಸಿನ್ ಮಾರಲು ಆ ದಿನ ಹೋಗಿದ್ದೆ. ಆ ದಿನ ಸಿದ್ದಾಪುರ ಹಾಗೂ ಹೊಸಂಗಡಿಗೆ ಹೋಗಿದ್ದೆ.

3. ನನಗೆ ನನ್ನ ತಾಯಿ ಹೇಳಿ ಗೊತ್ತಾಗಿದೆ ಎಂದರೆ ಸಾಕ್ಷಿ ಆಗ ಪ್ರಜ್ಞೆ ತಪ್ಪಿದ್ದರು ನೀರು ಎಲ್ಲ ಕೊಟ್ಟ ನಂತರ ನನಗೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮನೆಗೆ ಬಂದಾಗ 3.00 ಗಂಟೆ ಆಗಿರಬಹುದು. ನಾನು ಮನೆಗೆ ಬಂದಾಗ ಅಮ್ಮ ಮತ್ತು ಕುಟ್ಟಿ ಇಬ್ಬರು ಇದ್ದರು. ಕುಟ್ಟಿ ಈಗ ಮೃತಪಟ್ಟಿರುತ್ತಾರೆ. ನಾನು ನೋಡಿದಾಗ ಆರೋಪಿತರು ಮನೆಯಿಂದ ಓಡಿ ಹೋಗುತ್ತಿದ್ದರು. ನಾನು ಹಾಗೂ ಅಮ್ಮ ಇಬ್ಬರು ಠಾಣೆಗೆ ಹೋಗಿದ್ದೆವು. ಠಾಣೆಗೆ 19 ನೇ ತಾರೀಖಿನಂದು ಹೋಗಿರುತ್ತೇವೆ. ಠಾಣೆಯಲ್ಲಿ ಎಷ್ಟು ಸಹಿ ತೆಗೆದುಕೊಂಡಿರುತ್ತಾರೆ ಎಂದು ನೆನಪಿರುವುದಿಲ್ಲ.

4. ನಾನು ಬಸ್ಸನ್ನು 2.45 ಕ್ಕೆ ಇಳಿದಿರುತ್ತೇನೆ, ಮನೆಗೆ ಹೋಗುವಾಗ 3.00 ಗಂಟೆ ಆಗಿರಬಹುದು, ನಾನು ವಾಚ್ ಕಟ್ಟುವುದಿಲ್ಲ. ನಾನು ನನ್ನ ತಾಯಿ ಹಾಗೂ ಆರೋಪಿತರ ನಮಗೆ ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಜಮೀನಿನ ವಿಚಾರವಾಗಿ ತಕರಾರು ಇರುವುದರಿಂದ ನನ್ನ ತಾಯಿ ಸುಳ್ಳು ದೂರು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನನ್ನ ತಾಯಿಯನ್ನು ಅನಾರೋಗ್ಯದ ವಿಚಾರದಿಂದ ಆಸ್ಪತ್ರೆಗೆ ಸೇರಿಸಿ ಆರೋಪಿತರ ವಿರುದ್ಧ ಸುಳ್ಳು ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರ ಜಾಗವನ್ನು ಅಕ್ರಮವಾಗಿ ಲಪಟಾಯಿಸಬೇಕು ಎಂಬ ಕಾರಣದಿಂದ ಆರೋಪಿತರ ವಿರುದ್ಧ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ ಸಾಕ್ಷಿ ನಮ್ಮ ಬಳಿ ಮೂಲ ದಾಖಲೆ ಇರುತ್ತದೆ ಎಂದು ನುಡಿಯುತ್ತಾರೆ. ಆರೋಪಿತರಿಗೂ ಹಾಗೂ ಸದರಿ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ